# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

KANNADA POST

ಸಂಪಾದಕ : ಮಂಜು ಬನವಾಸೆ

ಕನ್ನಡ ದಿನ ಪತ್ರಿಕೆ Kannada Daily

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.01 | Issue. 163 | Pages. 2 | Date: 03-05-2025, SATURDAY RNI NO: KARKAN/2024/89601

ಸಂಪುಟ : 01 - ಸಂಚಿಕೆ : 163 - ಪುಟಗಳು : 2 - 03 ಮೇ 2025 ಶನಿವಾರ Ph: 8762954248 ದರ : ₹1


# ಭದ್ರಾ ಅಭಯಾರಣ್ಯದಲ್ಲಿ ಶೀಘ್ರ ಸಾಫ್ಟ್ ರಿಲೀಸ್ ಸೆಂಟರ್

## ಸರ್ಕಾರದಿಂದ 53 ಕೋಟಿ ರೂ. ಅನುದಾನ ಅರಣ್ಯ ಸಚಿವ ಈಶ್ವರ್ ಖಂಡ್ರೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಮಲೆನಾಡಿನ ಜನರ ಶಾಂತಿಗೆ ಭಂಗ ತಂದಿರುವ ಕಾಡಾನೆ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಶಿವಮೊಗ್ಗ ಜಿಲ್ಲೆ ಭದ್ರಾ ಅರಣ್ಯ ವ್ಯಾಪ್ತಿಯಲ್ಲಿ ಸಾಫ್ಟ್ ರಿಲೀಸ್ ಸೆಂಟರ್ ಆರಂಭಿಸಲಾಗುವುದು ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

ಕಾಡಾನೆ ದಾಳಿಗೆ ಇತ್ತೀಚೆಗೆ ಬಲಿಯಾದ ತಾಲ್ಲೂಕಿನ ಬೈಕೆರೆ ಗ್ರಾಮದ ಷಣ್ಮುಖ ಅವರ ಮನೆಗೆ ಶುಕ್ರವಾರ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

ವಾರದ ಹಿಂದೆ ಚಾಮರಾಜನಗರ ಜಿಲ್ಲೆಯ ಮಲೆಮಹದೇಶ್ವರ ಬೆಟ್ಟದಲ್ಲಿ ನಡೆದ ಅರಣ್ಯ ಇಲಾಖೆಯ ಉನ್ನತ ಅಧಿಕಾರಿಗಳ ಸಭೆಯಲ್ಲಿ ಸಾಫ್ಟ್ ರೀಲಿಫ್ ಸೆಂಟರ್ ಆರಂಭಿಸುವ ಬಗ್ಗೆ ಚರ್ಚೆ ನಡೆದಿದ್ದು ಉಪಟಳ ನೀಡುತ್ತಿರುವ ಕಾಡಾನೆಗಳನ್ನು ಸೆಂಟರ್‌ಗೆ ಸಾಗಿಸಿ ಅವುಗಳು ಶಾಂತವಾದ ಬಳಿಕ ಅಭಯಾರಣ್ಯಕ್ಕೆ ಬಿಡಲಾಗುವುದು ಎಂದರು.

ಯೋಜನೆಗಾಗಿ 53 ಕೋಟಿ ರೂ. ಅನುದಾನ ಬಿಡುಗಡೆ ಮಾಡಲಾಗಿದ್ದು 8 ರಿಂದ 10 ತಿಂಗಳಿನಲ್ಲಿ ಈ ಯೋಜನೆ ಕಾರ್ಯರೂಪಕ್ಕೆ ಬರಲಿದೆ. ಜಿಲ್ಲೆಯಲ್ಲಿ ಕಾಡಾನೆ-ಮಾನವ ಸಂಘರ್ಷ ಅತಿಯಾಗಿದೆ. ಒಂದು ವರ್ಷದಲ್ಲಿ 7 ಜನರು ಮೃತಪಟ್ಟಿದ್ದಾರೆ. ಅರಣ್ಯ ಇಲಾಖೆ ಸಿಬ್ಬಂದಿ ಸಹ ಪ್ರಾಣಹಾನಿ ತಡೆಗಟ್ಟುವ ನಿಟ್ಟಿನಲ್ಲಿ ಶಕ್ತಿ ಮೀರಿ ಕೆಲಸ ಮಾಡುತ್ತಿದ್ದಾರೆ. ಸರ್ಕಾರ ಸಹ ಹಲವು ಘಟಕಗಳನ್ನು ತೆರೆದು ಕಾಡಾನೆ ಮಾನವ-ಸಂಘರ್ಷ ತಡೆಗೆ ಮುಂದಾಗಿದೆ. ಸದ್ಯ ಡ್ರೋನ್ ಕ್ಯಾಮರಾ ಮೂಲಕ ಕಾಡಾನೆಗಳ ಗುರುತಿಸುವ ಹಂತವಾಗಿ ಹಾಸನ ಅರಣ್ಯ ಇಲಾಖೆ ಎರಡು ಕ್ಯಾಮರಾ ಖರೀದಿಸಲಾಗಿದೆ ಎಂದರು.

ಕಾಡಾನೆ - ಮಾನವ ಸಂಘರ್ಷ ಕೇವಲ ರಾಜ್ಯಕ್ಕೆ ಮಾತ್ರ ಸೀಮಿತವಾಗಿಲ್ಲ. ಇಡೀ ದೇಶದಲ್ಲೆ ಈ ಸಮಸ್ಯೆ ಇದ್ದು ಪರಿಹಾರಕ್ಕೆ ಸಮಯ ಹಿಡಿಯಲಿದೆ. ಸಮಸ್ಯೆ ಪರಿಣಾಮಕಾರಿಯಾಗಿ ಪರಿಹರಿಸುವ ನಿಟ್ಟಿನಲ್ಲಿ ಮೇ ತಿಂಗಳ ಅಂತ್ಯದಲ್ಲಿ ಬೆಳಗಾರರು, ತಜ್ಞರು ಹಾಗೂ ಅಧಿಕಾರಿಗಳನ್ನೊಳಗೊಂಡ ಸಭೆ ನಡೆಸಿದ ನಂತರ ಕಾಡಾನೆ ಪೀಡಿತ ಕ್ಷೇತ್ರದ ಶಾಸಕರೊಂದಿಗೆ ದೆಹಲಿಗೆ ನಿಯೋಗ ತೆರಳಿ ಕೇಂದ್ರ ಅರಣ್ಯ ಸಚಿವರೊಂದಿಗೆ ಚರ್ಚೆ ನಡೆಸಲಾಗುವುದು ಎಂದರು.



### ಸರ್ಕಾರಿ ನೌಕರಿ ಭರವಸೆ

ಮೃತ ಷಣ್ಮುಖ ಅವರ ಪತ್ನಿಗೆ ಸರ್ಕಾರಿ ಉದ್ಯೋಗ ನೀಡುವ ನಿಟ್ಟಿನಲ್ಲಿ ಮುಖ್ಯಮಂತ್ರಿ ಜೊತೆಗೆ ಚರ್ಚೆ ನಡೆಸಲಾಗುವುದು. ತಾಲ್ಲೂಕಿನಲ್ಲಿ ಉಪಟಳ ನೀಡುತ್ತಿರುವ ಮತ್ತೆರಡು ಕಾಡಾನೆ ಸೆರೆ ಕಾರ್ಯಾಚರಣೆ ಆರಂಭಿಸಲಾಗುವುದು. ಕಾಡಾನೆ ದಾಳಿಯಿಂದ ಮೃತಪಟ್ಟ ಕುಟುಂಬಗಳಿಗೂ ಸಹ ಒಂದೇ ಹಂತದಲ್ಲಿ ಪರಿಹಾರ ನೀಡಲಾಗುತ್ತಿದೆ. ನಮ್ಮ ಸರ್ಕಾರದ ಅವಧಿಯಲ್ಲಿ ಕಾಡಾನೆ ದಾಳಿಯಿಂದ ಮೃತಪಟ್ಟವರ ಸಂಖ್ಯೆ ಸರಾಸರಿ ಲೆಕ್ಕದಲ್ಲಿ ಕಡಿಮೆ ಇದೆ. ಮುಂದಿನ ದಿನಗಳಲ್ಲಿ ಕಾಡಾನೆಯಿಂದ ಪ್ರಾಣ ಹಾನಿಯಾಗದಂತೆ ಕ್ರಮವಹಿಸಲು ಅಗತ್ಯವಿರುವ ಎಲ್ಲ ಕ್ರಮಗಳನ್ನು ಅರಣ್ಯ ಇಲಾಖೆ ಸಿಬ್ಬಂದಿ ಕೈಗೊಳ್ಳಲಿದ್ದಾರೆ ಎಂದರು.

### ಉಗ್ರರ ಮಟ್ಟ ಹಾಕಲು ಸಂಪೂರ್ಣ ಬೆಂಬಲ

ಜಮ್ಮು-ಕಾಶ್ಮೀರದಲ್ಲಿ ಭೀಕರ ದಾಳಿಗಳು ನಡೆದಿದ್ದರೆ ಅದು ಬಿಜೆಪಿ ಆಡಳಿತಾವಧಿಯಲ್ಲೇ ಹೆಚ್ಚು. ಕಾರ್ಗಿಲ್ ಯುದ್ಧ, ಸಂಸತ್ ಮೇಲೆ ದಾಳಿ ಈ ಸರ್ಕಾರದ ಅವಧಿಯಲ್ಲೆ ನಡೆದಿದೆ. ಕೇಂದ್ರ ಸರ್ಕಾರ ಕಾಂಗ್ರೆಸ್‌ನತ್ತ ಬೊಟ್ಟು ಮಾಡುತ್ತಿದೆ ಎಂದು ಕಿಡಿಕಾರಿದರು.

ಉಗ್ರರ ಸಂಹಾರಕ್ಕೆ ಕಾಂಗ್ರೆಸ್ ನಾಯಕರ ಸಂಪೂರ್ಣ ಸಹಕಾರವಿದ್ದು ಈಗಾಗಲೇ ಇದನ್ನು ಸ್ಪಷ್ಟಪಡಿಸಲಾಗಿದೆ. ಮಂಗಳೂರಿನ ಸುಹಾಸ್ ಶೆಟ್ಟಿ ಕೊಲೆಗೆಡುಕರ ಬಗ್ಗೆ ಈಗಾಗಲೇ ಮಾಹಿತಿ ದೊರೆತಿದ್ದು ಶೀಘ್ರವೇ ಅವರಿಗೆ ತಕ್ಕ ಶಿಕ್ಷೆಯಾಗಲಿದೆ.


ಹಿಂಸಾಚಾರ ನಡೆಸುವವರಿಗೆ ಜಾತಿ ಧರ್ಮಗಳಿಲ್ಲ. ಯಾರೆ ಹಿಂಸಾಚಾರ ನಡೆಸಿದರು ಅವರಿಗೆ ತಕ್ಕ ಶಿಕ್ಷೆಯನ್ನು ಸರ್ಕಾರ ನೀಡಲಿದೆ. ಇದರಲ್ಲಿ ಯಾವುದೆ ರಾಜಕೀಯವಿಲ್ಲ ಎಂದು ಸ್ಪಷ್ಟಪಡಿಸಿದರು.

ಸಂಸದ ಶ್ರೇಯಸ್ ಪಟೇಲ್, ಶಾಸಕ ಸಿಮೆಂಟ್ ಮಂಜು, ಕಾಂಗ್ರೆಸ್ ನಾಯಕ ಮುರಳಿ ಮೋಹನ್, ಸಿಸಿಎಫ್ ಎಡುಕುಂಡಲು, ಡಿಎಫ್ಓ ಸೌರಭ್‌ಕುಮಾರ್ ಇತರರಿದ್ದರು.

> ಕಾಡಾನೆ ಸಮಸ್ಯೆ ಕೇವಲ ಕರ್ನಾಟಕಕ್ಕೆ ಸೀಮಿತವಾಗಿಲ್ಲ. ಈ ಬಗ್ಗೆ ಅಧಿಕಾರಿ ಹಾಗೂ ಸಂಬಂಧಪಟ್ಟ ಕ್ಷೇತ್ರ ಶಾಸಕರೊಂದಿಗೆ ಚರ್ಚಿಸಿ ಕೇಂದ್ರಕ್ಕೆ ನಿಯೋಗ ತೆರಳಲಾಗುವುದು. ಸಮಸ್ಯೆ ಪರಿಹಾರಕ್ಕೆ ಕೇಂದ್ರವು ಸಹಕಾರ ನೀಡಬೇಕಾಗುತ್ತದೆ.
>
> - ಈಶ್ವರ್ ಖಂಡ್ರೆ, ಅರಣ್ಯ ಸಚಿವ

## ಪರೀಕ್ಷೆಯಲ್ಲಿ ಫೇಲ್ ವಿದ್ಯಾರ್ಥಿ ಆತ್ಮಹತ್ಯೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಾಸನ: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅನುತ್ತೀರ್ಣಗೊಂಡ ಅರಕಲಗೂಡು ತಾಲ್ಲೂಕಿನ ವಿದ್ಯಾರ್ಥಿ ಜಿಗುಪ್ಸೆಯಿಂದ ಬೆಂಗಳೂರಿನ ಅಜ್ಜಿ ಮನೆಯಲ್ಲಿ ಶುಕ್ರವಾರ ಆತ್ಮಹತ್ಯೆಗೆ ಶರಣಾಗಿದ್ದಾನೆ.

ತಾಲ್ಲೂಕಿನ ಹಳ್ಳಿಮೈಸೂರು ಗ್ರಾಮದ ಸರ್ಕಾರಿ ಪ್ರೌಢ ಶಾಲೆಯ ಪಲಕೊಡು ಶ್ರೀಧರ್ ರೆಡ್ಡಿ (15) ಮೃತ. ರಜೆ ಹಿನ್ನಲೆಯಲ್ಲಿ ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ ಅಜ್ಜಿ ಮನೆಗೆ ತೆರಳಿದ್ದ. ಆಂಧ್ರಪ್ರದೇಶ ಮೂಲದ ವೆಂಕಟರಮಣ ರೆಡ್ಡಿ ಗುತ್ತಿಗೆದಾರ ವೃತ್ತಿ ಮಾಡಿಕೊಂಡಿದ್ದಾರೆ. ಕೆಲಸದ ನಿಮಿತ್ತ ಹಳ್ಳಿಮೈಸೂರಿನಲ್ಲೇ ಕುಟುಂಬ ವಾಸವಿದೆ. ಮಧ್ಯಾಹ್ನ ಪರೀಕ್ಷೆ ಫಲಿತಾಂಶ ಪ್ರಕಟವಾಗಿದ್ದು, ಅನುತ್ತೀರ್ಣನಾಗಿದ್ದರಿಂದ ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

## ಎಲೈಟ್ ಶಾಲೆಯ ವಿದ್ಯಾರ್ಥಿನಿಗೆ 7ನೇ ಸ್ಥಾನ



ಹಾಸನ: ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ನಗರದ ಹೇಮಾವತಿ ನಗರದ ಎಲೈಟ್ ಶಾಲೆ ಉತ್ತಮ ಸಾಧನೆ ಮಾಡಿದೆ.

ವಿದ್ಯಾರ್ಥಿನಿ ಕಲ್ಪಿತಾ ಎಂ. ರಾಜ್ 625ಕ್ಕೆ 619 ಅಂಕಗಳಿಸಿ ರಾಜ್ಯಕ್ಕೆ 7ನೇ ಸ್ಥಾನ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ. ಹಾರ್ದಿಕ್ ಪಿ. ಶೆಟ್ಟಿ 617, ವರ್ಷ 608, ಹೆಚ್.ವೈ. ನಿಖಿತ್ 607 ಅಂಕ ಪಡೆದಿದ್ದಾರೆ.

ಪರೀಕ್ಷೆ ಬರೆದ ಒಟ್ಟು ವಿದ್ಯಾರ್ಥಿಗಳಲ್ಲಿ 25 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ 25 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ, 3 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣ ರಾಗಿದ್ದಾರೆ. ಉತ್ತಮ ಅಂಕ ಪಡೆದ ಎಲ್ಲಾ ವಿದ್ಯಾರ್ಥಿಗಳಿಗೆ ಶಾಲಾ ಆಡಳಿತ ಮಂಡಳಿ, ಶಿಕ್ಷಕ ವೃಂದ ಹಾಗೂ ಬೋಧಕೇತರ ಸಿಬ್ಬಂದಿ ಅಭಿನಂದನೆ ಸಲ್ಲಿಸಿದ್ದಾರೆ.

## ಬೇಲೂರು ಪುರಸಭೆಯಲ್ಲಿ ಭಾರಿ ಹೈಡ್ರಾಮಾ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ಪುರಸಭೆ ಅಧ್ಯಕ್ಷ ಎ.ಆರ್. ಅಶೋಕ್ ವಿರುದ್ಧ ಶುಕ್ರವಾರ ಕರೆದಿದ್ದ ಅವಿಶ್ವಾಸ ನಿರ್ಣಯ ಸಭೆ ಆರಂಭದಿಂದಲೇ ಕೋಲಾಹಲ ಸೃಷ್ಟಿಸಿ ಭಾರಿ ಹೈಡ್ರಾಮಾ ಸೃಷ್ಟಿಯಾಯಿತು.

ಪುರಸಭೆ ಉಪಾಧ್ಯಕ್ಷೆ ಉಷಾ ಸತೀಶ್ ಅವರ ವಿಶೇಷ ಅಧ್ಯಕ್ಷತೆಯಲ್ಲಿ ಸಭೆ ನಿಗದಿಯಾಗಿತ್ತು. ಒಟ್ಟು 23 ಸದಸ್ಯ ಬಲದ ಪುರಸಭೆಯಲ್ಲಿ 17 ಕಾಂಗ್ರೆಸ್, 5 ಜೆಡಿಎಸ್ ಹಾಗೂ ಒಬ್ಬ ಬಿಜೆಪಿ ಸದಸ್ಯರಿದ್ದಾರೆ. ಶುಕ್ರವಾರದ ಅವಿಶ್ವಾಸ ನಿರ್ಣಯ ಸಭೆಗೆ ಮತದಾನದ ಹಕ್ಕು ಹೊಂದಿರುವ ಶಾಸಕ ಹೆಚ್.ಕೆ. ಸುರೇಶ್, ಸಂಸದ ಶ್ರೇಯಸ್ ಪಟೇಲ್ ಸಹ ಭಾಗಿಯಾಗಿದ್ದರು.

ಪುರಸಭೆ ಸಭಾಂಗಣಕ್ಕೆ ಬರುತ್ತಿದ್ದಂತೆ ಸದಸ್ಯರು ಮೇಜು ಕುಟ್ಟುತ್ತಾ ಕೋಲಾಹಲ ಎಬ್ಬಿಸಿದರು. ಶಾಸಕ ಹೆಚ್.ಕೆ. ಸುರೇಶ್ ಜೊತೆಗೆ ಎ.ಆರ್. ಅಶೋಕ್, ಜೆಡಿಎಸ್ ಮತ್ತು ಬಿಜೆಪಿಯ ಎಂಟು ಸದಸ್ಯರು ಬಂದರು. ಮತ್ತೊಂದೆಡೆ ಅವಿಶ್ವಾಸಕ್ಕೆ ಆಗ್ರಹಿಸಿದ್ದ ಸಂಸದ ಸೇರಿ 14 ಕಾಂಗ್ರೆಸ್ ಸದಸ್ಯರು ಬಂದರು.



ಉಷಾ ಸತೀಶ್ ಸಭೆ ಆರಂಭಿಸಲು ಮುಂದಾಗುತ್ತಿದ್ದಂತೆ ಆಕ್ಷೇಪ ವ್ಯಕ್ತಪಡಿಸಿದ ಕಾಂಗ್ರೆಸ್ ಸದಸ್ಯರಾದ ಜಿ. ಶಾಂತಕುಮಾರ್, ಭರತ್, ಬಿ. ಗಿರೀಶ್ ಹಾಗೂ ಇತರರು ಪುರಸಭೆ ಮುಖ್ಯಾಧಿಕಾರಿ ಸುಜಯ್ ವಿರುದ್ಧ ಧಿಕ್ಕಾರ ಕೂಗಿದರು. ಅವಿಶ್ವಾಸ ನಿರ್ಣಯ ಗೊತ್ತುವಳಿ ಸಭೆಯ ನೋಟೀಸ್ ಕೊಟ್ಟಿಲ್ಲ. ಪುರಸಭೆಯಲ್ಲಿ ಕೋಟ್ಯಾಂತರ ರೂಪಾಯಿ ಭ್ರಷ್ಟಾಚಾರ ನಡೆಯುತ್ತಿದೆ. ಎ.ಆರ್. ಅಶೋಕ್ ಅವರ ಸ್ವಜನಪಕ್ಷಪಾತ ಮಿತಿಮೀರಿದೆ. ಅವ್ಯವಹಾರಕ್ಕೆ ಶಾಸಕರೇ ಕುಮ್ಮಕ್ಕು ನೀಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಇಷ್ಟು ಮಾತ್ರವಲ್ಲದೆ ತಮ್ಮ ಎದುರಿಗೆ ಇದ್ದ ಟೇಬಲ್, ಕುರ್ಚಿಗಳನ್ನು ತೂರಾಡಿದರು. ಕೆಲವರು ಮುಖ್ಯಾಧಿಕಾರಿ ಸುತ್ತಲೂ ಸುತ್ತುವರೆದು ಹೈಡ್ರಾಮಾ ಮಾಡಿದರು.

ಮುಖ್ಯಾಧಿಕಾರಿ ಸುಜಯ್ ಅವರಿಗೆ ಆಚೆ ತೆರಳದಂತೆ ನಿರ್ಬಂಧ ಹಾಕಿದ ಕಾಂಗ್ರೆಸ್ ಸದಸ್ಯರು ಇಂದಿನ ಸಭೆಯನ್ನು ಮುಂದೂಡಲಾಗಿದೆ ಎಂದು ನಡಾವಳಿ ಬರೆಯಲು ಸೂಚಿಸಿದರು. ಅದಕ್ಕೆ ಸುಜಯ್ ಅವರು ಒಪ್ಪದೆ ಇದ್ದಾಗ ಮಾತಿನ ವಾಕ್ಸಮರ ನಡೆದು ಬಳಿಕ ಉಪಾಧ್ಯಕ್ಷೆ ಉಷಾ ಸತೀಶ್ ಅವರೇ ನಡಾವಳಿ ಬರೆದರು. ಆಗಲೂ ಮುಖ್ಯಾಧಿಕಾರಿ ಸಹಿ ಮಾಡಲಿಲ್ಲ. ಮತ್ತೊಂದೆಡೆ ಬಿಜೆಪಿ ಹಾಗೂ ಜೆಡಿಎಸ್‌ನ 7 ಸದಸ್ಯರು ಇಷ್ಟೆಲ್ಲಾ ಗಲಾಟೆ ನಡೆದರೂ ಕುಳಿತಲ್ಲಿಯೇ ಕುಳಿತಿದ್ದರು.

# ಎಸ್‌ಎಸ್‌ಎಲ್‌ಸಿಯಲ್ಲಿ ಹಾಸನಕ್ಕೆ 6ನೇ ಸ್ಥಾನ


## 3441 ವಿದ್ಯಾರ್ಥಿಗಳು ಫೇಲ್ ಮೇ 26 ರಿಂದ ಪರೀಕ್ಷೆ-2

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ. 82.12 ಫಲಿತಾಂಶದ ಮೂಲಕ ಹಾಸನ 6ನೇ ಸ್ಥಾನಕ್ಕೆ ತೃಪ್ತಿಪಟ್ಟಿದ್ದು ಜಿಲ್ಲಾವಾರು ಪಟ್ಟಿಯಲ್ಲಿ ಯಥಾಸ್ಥಿತಿ ಕಾಪಾಡಿಕೊಂಡಿದೆ.

ಕಳೆದ ವರ್ಷ ಸಹ ಶೇ. 86 ಫಲಿತಾಂಶದೊಂದಿಗೆ 6ನೇ ಸ್ಥಾನ ಪಡೆದಿತ್ತು. ಪರೀಕ್ಷೆ ಬರೆದಿದ್ದ 19248 ವಿದ್ಯಾರ್ಥಿಗಳಲ್ಲಿ 15807 ಮಕ್ಕಳು ಉತ್ತೀರ್ಣರಾಗಿದ್ದರೆ 3441 ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ. ಸಕಲೇಶಪುರ ತಾಲ್ಲೂಕು ಶೇ. 93.51, ಆಲೂರು ಶೇ. 87.98, ಅರಸೀಕೆರೆ 85.39, ಹಾಸನ 82.69, ಅರಕಲಗೂಡು ಶೇ. 82.54, ಬೇಲೂರು ಶೇ. 80.50, ಚನ್ನರಾಯಪಟ್ಟಣ ಶೇ. 78.55 ಹಾಗು ಹೊಳೆನರಸೀಪುರ ತಾಲ್ಲೂಕು ಶೇ. 75.26 ಫಲಿತಾಂಶ ಸಾಧಿಸಿದೆ. ಪಾಸಾಗಿರುವ ಒಟ್ಟು ವಿದ್ಯಾರ್ಥಿಗಳಲ್ಲಿ A+ 2005, A 3442, B+ 3640, B 3726, C 284, C+ 2710 ಮಕ್ಕಳು ಗ್ರೇಡ್ ಪಡೆದಿದ್ದಾರೆ.

ಪರೀಕ್ಷಾರ್ಥಿಗಳಿಗೆ ಮೇ-7 ರ ವರೆಗೆ ಸ್ಕ್ಯಾನ್ ಪ್ರತಿ ಪಡೆಯಲು ಅವಕಾಶ ಇರಲಿದೆ. ಮೇ 4 ರಿಂದ 11ರ ವರೆಗೆ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಬಹುದು. ಎಸ್‌ಎಸ್‌ಎಲ್‌ಸಿ ಪರೀಕ್ಷೆ-2 ಮೇ 26 ರಿಂದ ಜೂನ್ 2ರ ವರೆಗೆ ನಡೆಯಲಿದೆ. 2ನೇ ಪರೀಕ್ಷೆಯಲ್ಲೂ ಅನುತ್ತೀರ್ಣರಾಗುವ ವಿದ್ಯಾರ್ಥಿಗಳು ಪರೀಕ್ಷೆ 3 ಬರೆಯಲು ಅವಕಾಶವಿದ್ದು, ಜೂನ್ 23 ರಿಂದ 30ರ ವರೆಗೆ ನಡೆಯಲಿದೆ.



### ಸಕಲೇಶಪುರ ರೋಟರಿ ಶಾಲೆ ಸಾಧನೆ

ಸಕಲೇಶಪಪುರ: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪಟ್ಟಣದ ರೋಟರಿ ಆಂಗ್ಲ ಮಾಧ್ಯಮ ಶಾಲೆಯ 18 ವಿದ್ಯಾರ್ಥಿಗಳು ಶೇ. 95ಕ್ಕಿಂತ ಹೆಚ್ಚು ಅಂಕ ಗಳಿಸಿದ್ದಾರೆ. 60 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ, 38 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತೀರ್ಣರಾಗಿದ್ದಾರೆ.

ವಿ.ಬಿ. ಆಕಾಶ್ 625ಕ್ಕೆ 617, ಬಿ.ವಿ. ಬಸಂತ್‌ಕುಮಾರ್ 614, ಕೆ.ಎಂ. ಆಯುಷ್ ಮತ್ತು ಕೆ.ಎಸ್ ಹಾರ್ದಿಕ್ 612 ಅಂಕ ಗಳಿಸಿದ್ದಾರೆ.

ಇಲ್ಹಾಮ್ ಫಾತಿಮಾ ಶೇ. 97, ಮಹಮ್ಮದ್ ಶಮ್ಮಾಜ್ ಶೇ. 97, ಎಚ್.ಬಿ. ಪ್ರೇಕ್ಷಿತಾ ಶೈವಾ ಶೇ.97, ಎ. ಪ್ರೇಕ್ಷಿತಾ ಶೇ.97, ಎಸ್. ಪ್ರೀತಮ್ ಶೇ.96, ಎಸ್‌ಎಂ. ಹೃದಯ್ ಶೇ. 96, ಕೆ.ಎಂ. ಅಫುನ್ಯ ಶೇ. 96, ಅಮೋಘವರ್ಷ ಶೇ. 96, ಎಂ.ಡಿ. ಸುಜನ್ ಶೇ. 96, ಆಯುಷಿ ಇಶಾಲ ಮನು ಶೇ. 96, ಶ್ರೇಯಾ ಶೇ.96, ಎಂ.ಆರ್. ನೂತನ್ ಶೇ.95, ಸೈಯದಾ ಸಮ್ನ ಅಲ್ಫೆನಾ ಶೇ. 95, ಎಸ್.ಆರ್. ಸಹನಾ ಶೇ. 96 ಅಂಕಗಳನ್ನು ಗಳಿಸಿದ್ದಾರೆ ಎಂದು ರೋಟರಿ ವಿದ್ಯಾ ಸಂಸ್ಥೆಯ ಅಧ್ಯಕ್ಷ ಕೆ.ಬಿ. ಸುಬ್ರಹ್ಮಣ್ಯ ಹಾಗೂ ಕಾರ್ಯದರ್ಶಿ ಅರುಣ್ ರಕ್ಷಿದಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಉತ್ಸವ್ ಪಟೇಲ್ ರಾಜ್ಯಕ್ಕೆ ಟಾಪರ್

ವಿಜಯ ಶಾಲೆಯ ವಿದ್ಯಾರ್ಥಿ ಉತ್ಸವ್ ಪಟೇಲ್ 625ಕ್ಕೆ 625 ಅಂಕ ಪಡೆದು ರಾಜ್ಯಕ್ಕೆ ಟಾಪರ್ ಎನಿಸಿಕೊಂಡಿದ್ದಾರೆ.

ಈ ಕುರಿತು ಪತ್ರಿಕೆಯೊಂದಿಗೆ ಮಾತನಾಡಿದ ಅವರು, ನಿರೀಕ್ಷೆಯಂತೆ ಫಲಿತಾಂಶ ಬಂದಿದ್ದು ಯುಪಿಎಸ್‌ಸಿ ಪರೀಕ್ಷೆ ಬರೆದು ನಾಗರಿಕ ಸೇವೆಯ ಗುರಿ ಹೊಂದಿದ್ದೇನೆ ಎಂದು ಹೇಳಿದರು.

ರಾಜ್ಯಕ್ಕೆ ಟಾಪರ್ ಆಗುತ್ತೇನೆ ಎಂದುಕೊಂಡಿರಲಿಲ್ಲ. ನಿತ್ಯ 4 ಗಂಟೆ ಅಭ್ಯಾಸ ಮಾಡುತ್ತಿದ್ದೆ. ಬೆಳಿಗ್ಗೆ 5 ಗಂಟೆಗೆ ಓದಲು ಶುರು ಮಾಡುತ್ತಿದ್ದೆ.

ಬೆಳಗಿನ ಅವಧಿಯ ಓದು ಏಕಾಗ್ರತೆ ಹಾಗು ಜ್ಞಾಪಕ ಶಕ್ತಿ ವೃದ್ಧಿಗೆ ನೆರವಾಯಿತು. ಶಾಲೆಯಲ್ಲಿ ಬೇಗ ಪಾಠ ಬೋಧನೆ ಮುಗಿಸಿದ್ದರಿಂದ ಓದಲು ಅನುಕೂಲವಾಯಿತು. ಪೂರ್ವ ಸಿದ್ಧತಾ ಪರೀಕ್ಷೆಯಲ್ಲೂ ಉತ್ತಮ ಅಂಕ ಪಡೆದಿದ್ದರಿಂದ ಆತ್ಮವಿಶ್ವಾಸ ಹೆಚ್ಚಿಸಿತ್ತು. ಯಾವುದೇ ಭಯವಿಲ್ಲದೆ ಪರೀಕ್ಷೆ ಎದುರಿಸಿದ್ದರಿಂದ ಉತ್ತಮ ಅಂಕಗಳು ಬಂದಿವೆ ಎಂದರು.

ಶಾಲೆಯ ಎಲ್ಲಾ ಶಿಕ್ಷಕರು ಬಹಳ ಸಂಯಮ, ಪ್ರೀತಿಯಿಂದ ಪಠ್ಯ ಬೋಧನೆ ಮಾಡಿದರು. ಮನೆಯಲ್ಲಿ ತಂದೆ-ತಾಯಿ ಸಹ ಇಷ್ಟೇ ಫಲಿತಾಂಶ ಗಳಿಸಬೇಕೆಂದು ಒತ್ತಡ ಹೇರಲಿಲ್ಲ. ನನ್ನ ಓದಿಗೆ ಪೋಷಕರ ಸಹಕಾರ ಹೆಚ್ಚಿದೆ. ಅವರ ಕನಸು ನನಸು ಮಾಡಿರುವ ಖುಷಿ ಇದೆ. ನಾಗರಿಕ ಸೇವೆಯಲ್ಲಿ ತೊಡಗಿಸಿಕೊಳ್ಳಬೇಕೆಂಬ ಗುರಿಯಿದೆ. ಪಿಯುಸಿಗೆ ವಿಜ್ಞಾನ ಆಯ್ಕೆ ಮಾಡಿಕೊಂಡಿದ್ದು ಕಾರ್ಕಳದ ಕಾಲೇಜಿನಲ್ಲಿ ಪ್ರವೇಶ ಪಡೆದಿದ್ದೇನೆ ಎಂದು ಹೇಳಿದರು.

### ಶಾಲೆಗೆ ಶೇ. 100 ಫಲಿತಾಂಶ





ಒಬ್ಬ ವಿದ್ಯಾರ್ಥಿ 625ಕ್ಕೆ 625 ಅಂಕ ಪಡೆಯುವ ಮೂಲಕ ರಾಜ್ಯಕ್ಕೆ ಟಾಪರ್‌ನನ್ನು ಕೊಟ್ಟಿರುವ ವಿಜಯ ಶಾಲೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ. 100 ಫಲಿತಾಂಶ ಗಳಿಸಿದೆ. ಉತ್ಸವ್ ಪಟೇಲ್ 625, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಡಿ.ಟಿ. ಪ್ರಸನ್ನ ಅವರ ಪುತ್ರ ಡಿ.ಪಿ. ಚೇತನ್ 624, ಕಿರಣ್ ಗೌಡ 624 ರಾಜ್ಯಕ್ಕೆ ದ್ವಿತೀಯ, ಹೆಚ್. ಹೇಮಶ್ರೀ 623, ತ್ರಿಭುವನ್ ಎಸ್. ಗೌಡ 622 ಅಂಕ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ.

### ಮೂರನೇ ಸ್ಥಾನ ಜಸ್ಟ್ ಮಿಸ್

ಪ್ರಥಮ ಸ್ಥಾನ ಸಾಧ್ಯವಾಗದಿದ್ದರೂ ಟಾಪ್ 3 ಪಟ್ಟಿಯಲ್ಲಿ ಹಾಸನದ ಹೆಸರಿರಬೇಕೆಂದು ಎಲ್ಲಾ ಶಿಕ್ಷಕರು, ಅಧಿಕಾರಿಗಳು ಶಕ್ತಿಮೀರಿ ಕೆಲಸ ಮಾಡಿದ್ದರು.

ಇನ್ನು ಕೇವಲ 25 ರಿಂದ 30 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದರೆ ಟಾಪ್ 3 ಸ್ಥಾನದಲ್ಲಿ ಹಾಸನ ಇರುತ್ತಿತ್ತು ಎಂದು ಪ್ರಭಾರ ಡಿಡಿಪಿಐ ಹೆಚ್.ಎಸ್. ಚಂದ್ರಶೇಖರ್ ಅವರು ಹೇಳಿದರು.

> ಪಾರದರ್ಶಕ ಪರೀಕ್ಷೆಯ ಫಲಿತಾಂಶ ಇದಾಗಿದ್ದು ಮುಂದಿನ ವರ್ಷ ಇನ್ನಷ್ಟು ಸುಧಾರಣೆ ಮಾಡಿಕೊಳ್ಳುತ್ತೇವೆ.
>
> ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಮಕ್ಕಳನ್ನು ಅಣಿಗೊಳಿಸಿದ ಎಲ್ಲಾ ಶಿಕ್ಷಕರಿಗೆ, ನಿರಂತರ ಅಧ್ಯಯನ ಮೂಲಕ ಒಳ್ಳೆಯ ಅಂಕ ಪಡೆದ ಮಕ್ಕಳಿಗೆ ಅಭಿನಂದನೆಗಳು.
>
> ಉತ್ತಮ ಫಲಿತಾಂಶಕ್ಕಾಗಿ ಶಿಕ್ಷಕರ ಸಂಘವು ಹೆಚ್ಚು ಶ್ರಮ ವಹಿಸಿದೆ.
>
> ಹೆಚ್.ಎಸ್. ಚಂದ್ರಶೇಖರ್, ಪ್ರಭಾರ ಡಿಡಿಪಿಐ

# ಸರ್ಕಾರಿ ಕಚೇರಿಗಳಲ್ಲಿ ಸ್ವಚ್ಛತೆ ಮಾಯ

## ಖಾಲಿ ಜಾಗದಲ್ಲಿ ಪಾರ್ಥೇನಿಯಂ ಸಾರ್ವಜನಿಕರ ಅಸಮಾಧಾನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರ ಸೇರಿ ಜಿಲ್ಲೆಯ ಬಹುತೇಕ ಸರ್ಕಾರಿ ಕಚೇರಿಗಳಲ್ಲಿ ಅನೈರ್ಮಲ್ಯ ತಾಂಡವವಾಡುತ್ತಿದ್ದು ಅಧಿಕಾರಿಗಳು ಕಣ್ಣಿದ್ದು ಕುರುಡರಂತೆ ವರ್ತಿಸುತ್ತಿರುವುದು ಸಾರ್ವಜನಿಕರ ಅಸಮಾಧಾನಕ್ಕೆ ಕಾರಣವಾಗಿದೆ.

ವಿವಿಧ ಕೆಲಸಕ್ಕಾಗಿ ನಿತ್ಯ ನೂರಾರು ಜನರು ಬರುವ ಕಚೇರಿಗಳು ಹಾಳು ಕೊಂಪೆಯಂತೆ ಭಾಸವಾಗುತ್ತಿವೆ. ನಗರದ ಉಪನೋಂದಣಾಧಿಕಾರಿ ಕಚೇರಿ, ತಹಶೀಲ್ದಾರ್ ಕಟ್ಟಡ ಆವರಣ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ ಕಚೇರಿ, ತಾಲ್ಲೂಕು ಆಸ್ಪತ್ರೆಗಳು, ವಿವಿಧ ಇಲಾಖೆ ಕಚೇರಿಗಳಲ್ಲಿ ಸಮಸ್ಯೆಗಳು ವಿಪರೀತವಾಗಿವೆ. ಕಚೇರಿ ಆವರಣದಲ್ಲಿ ಬೆಳೆದಿರುವ ಪಾರ್ಥೇನಿಯಂ ಗಿಡಗಳು ಅಲ್ಲಿನ ಅವ್ಯವಸ್ಥೆಯನ್ನು ಬೊಟ್ಟು ಮಾಡಿ ತೋರಿಸುತ್ತಿವೆ. ಅನೇಕ ಕಡೆ ಖಾಲಿ ಜಾಗದಲ್ಲಿ ಕೈ ತೋಟ ನಿರ್ಮಿಸಲಾಗಿದೆಯಾದರೂ ನಿರ್ವಹಣೆ ಇಲ್ಲದೆ ಸಸಿಗಳು ಒಣಗಿ ಹೋಗಿವೆ. ಮೇಲ್ಮಟ್ಟದ ಅಧಿಕಾರಿಗಳು ಕಾರಿನಲ್ಲಿ ಬಂದು ಹೋಗುವುದರಿಂದ ಅವರ ಗಮನಕ್ಕೆ ಬರುತ್ತಿಲ್ಲ.

### ಪಾರ್ಕಿಂಗ್ ಕಿರಿ ಕಿರಿ

ಸಾರ್ವಜನಿಕ ರಸ್ತೆಗಳಲ್ಲಿ ವಾಹನ ನಿಲುಗಡೆ ಸಮಸ್ಯೆಯಾಗುವುದು ಜನಜನಿತ. ಆದರೆ ಸರ್ಕಾರಿ ಕಚೇರಿಗಳಿಗು ಆ ಬಿಸಿ ತಟ್ಟಿದೆ. ಬೆಳಿಗ್ಗೆ ಕಚೇರಿಗೆ ಬೈಕ್, ಕಾರುಗಳಲ್ಲಿ ಬರುವ ನೌಕರರು ತಮ್ಮ ವಾಹನಗಳನ್ನು ಅಡ್ಡಾದಿಡ್ಡಿ ನಿಲ್ಲಿಸುವುದರಿಂದ ಬೇರೆ ವಾಹನ ಸವಾರರಿಗೆ ತೊಂದರೆಯಾಗುತ್ತಿದೆ. ನಗರಸಭೆಯಲ್ಲಿ ವಾಹನ ಪಾರ್ಕಿಂಗ್ ಮಾಡುವುದು ಸಾಹಸದ ಕೆಲಸ. ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರ ಕಚೇರಿ ಮುಂಭಾಗದ ರಸ್ತೆಯಲ್ಲಿ ಯಾವಾಗಲೂ ರಸ್ತೆ ಪಕ್ಕ ಕಾರುಗಳು ನಿಂತಿರುತ್ತವೆ. ಅಂಬೇಡ್ಕರ್ ಭವನ ಆವರಣದಲ್ಲಿ ಸ್ಥಳಾವಕಾಶವಿದ್ದರೂ ನೆರಳಿನ ಆಶ್ರಯಕ್ಕಾಗಿ ನೌಕರರು ತಮ್ಮ ವಾಹನಗಳನ್ನು ರಸ್ತೆಯ ಮರದ ಬಳಿ ನಿಲ್ಲಿಸುವುದರಿಂದ ಇತರ ವಾಹನಗಳ ಓಡಾಟಕ್ಕೆ ಭಾರೀ ತೊಂದರೆಯಾಗುತ್ತಿದೆ ಎಂದು ಸ್ಥಳೀಯರು ದೂರಿದ್ದಾರೆ.



### ಬ್ಯಾನರ್ ಹಾವಳಿ

ಇನ್ನು ಸರ್ಕಾರಿ ಶಾಲಾ ಕಾಲೇಜುಗಳಿಗೆ ಖಾಸಗಿ ಶಿಕ್ಷಣ ಸಂಸ್ಥೆಗಳ ಬ್ಯಾನರ್ ಹಾವಳಿ ಹೆಚ್ಚಾಗಿದೆ. ಪಿಯುಸಿ ಹಾಗು ಪದವಿ ತರಗತಿಗೆ ನಮ್ಮ ಸಂಸ್ಥೆಗೆ ಪ್ರವೇಶ ಪಡೆಯಿರಿ ಎಂಬ ಬ್ಯಾನರ್ ಗಳನ್ನು ಕಟ್ಟಿರುವ ದೃಶ್ಯಗಳನ್ನು ಕಾಣಬಹುದು. ಜೊತೆಗೆ ಸರ್ಕಾರಿ ಕಲಾ ಕಾಲೇಜು ಆವರಣದಲ್ಲಿ ನಿತ್ಯ ಒಂದಿಲ್ಲೊಂದು ಕಾರ್ಯಕ್ರಮಗಳು ನಡೆಯುವುದರಿಂದ ಫ್ಲೆಕ್ಸ್, ಬಂಟಿಂಗ್ಸ್ ನಿಂದ ಮಹಾವಿದ್ಯಾಲಯದ ಪ್ರವೇಶ ದ್ವಾರ ಯಾವಾಗಲೂ ರಾರಾಜಿಸುತ್ತಿರುತ್ತದೆ.

### ನೋಡುವಂತಿಲ್ಲ ಉಪನೋಂದಣಾಧಿಕಾರಿ ಕಚೇರಿ



ಮಿನಿ ವಿಧಾನಸೌಧದಲ್ಲಿರುವ ಉಪನೋಂದಣಾಧಿಕಾರಿ ಕಚೇರಿಗೆ ನಿತ್ಯ ಸಾವಿರಾರು ಜನರು ಭೇಟಿ ನೀಡುತ್ತಾರೆ. ಆದರೆ ಕುಡಿಯಲು ನೀರು, ಕುಳಿತುಕೊಳ್ಳಲು ಸುಸಜ್ಜಿತ ಆಸನ ವ್ಯವಸ್ಥೆಯಿಲ್ಲ. ಜಾಗ ಖರೀದಿ, ಮಾರಾಟ ಮತ್ತಿತರ ಉದ್ದೇಶದಿಂದ ದಾಖಲೆ ಪತ್ರಗಳನ್ನು ಹಿಡಿದು ವಯಸ್ಕರಿಂದ ವೃದ್ಧರ ವರೆಗೆ ಬರುತ್ತಾರೆ. ಮೊದಲನೇ ಮಹಡಿಯಲ್ಲಿ ಅಂತವರಿಗೆ ನಿಲ್ಲಲು ಸ್ಥಳಾವಕಾಶ ಇರುವುದಿಲ್ಲ. ಮಳೆ ಬಂದರೆ ಸಂಪೂರ್ಣ ನೆನೆಯಬೇಕಾದ ಪರಿಸ್ಥಿತಿ ಇದೆ. ಇನ್ನು ಖಾಲಿ ಜಾಗದಲ್ಲಿ ಪಾರ್ಥೇನಿಯಂ ಗಿಡ ಬೆಳೆದಿದ್ದು ಇದು ಸರ್ಕಾರಿ ಕಚೇರಿಯೋ ಅಥವಾ ಪಾಳು ಬಿದ್ದ ಜಮೀನು ಎಂಬ ಅನುಮಾನ ಮೂಡುತ್ತದೆ. ಇಂತಹ ಸ್ಥಳಗಳಲ್ಲಿ ಹಾವು ಮತ್ತಿತರ ಕ್ರಿಮಿ ಕೀಟಗಳು ಸೇರಿಕೊಳ್ಳುವ ಸಾಧ್ಯತೆಯೂ ಹೆಚ್ಚಿದೆ. ನಿತ್ಯ ಕಸ ಗುಡಿಸದೆ ದುರ್ವಾಸನೆ, ಧೂಳು ಹೆಚ್ಚಿದೆ. ಜೊತೆಗೆ ಕಚೇರಿಯ ಬಾಗಿಲುಗಳೆಲ್ಲ ಮುರಿದು ದುಸ್ಥಿತಿ ತಲುಪಿವೆ. ಹಲವು ವರ್ಷಗಳಿಂದ ಸಮಸ್ಯೆ ಹೀಗೆ ಇದ್ದರೂ ಸಂಬಂಧಪಟ್ಟವರು ಗಮನ ಹರಿಸದೆ ಇರುವುದು ವಿಪರ್ಯಾಸವೇ ಸರಿ.

# 2.35 ಕೋಟಿ ರೂ. ವೆಚ್ಚದ ಜಿನ ಬಸದಿಗೆ ಶಿಲಾನ್ಯಾಸ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಶ್ರವಣಬೆಳಗೊಳ: ವಿಂಧ್ಯಗಿರಿಯ ಪಶ್ಚಿಮ ಭಾಗದಲ್ಲಿರುವ ನಾಗಯ್ಯನಕೊಪ್ಪಲು ಬಳಿಯ ಬೋಳು ಬೆಟ್ಟದಲ್ಲಿ ಅಕ್ಷಯ ತೃತೀಯ ನಿಮಿತ್ತ ನೂತನ ಶಿಲಾಮಯ ಜಿನ ಬಸದಿಯ ಶಿಲಾನ್ಯಾಸವು ಕ್ಷೇತ್ರದ ಪೀಠಾಧಿಪತಿ ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಅವರ ಮಾರ್ಗದರ್ಶನದಲ್ಲಿ ಇತ್ತೀಚೆಗೆ ನೆರವೇರಿತು.



ಪೂಜೆಯ ಬಳಿಕ ಮಾತನಾಡಿದ ಶ್ರೀಗಳು, 40 ವರ್ಷಗಳ ಹಿಂದೆ ಕರ್ಮಯೋಗಿ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಸಮವಸರಣ ಬಸದಿಯನ್ನು ನಿರ್ಮಿಸಲು ಸಂಕಲ್ಪ ಮಾಡಿದ್ದರು. ಅದರಂತೆ ಇದೀಗ ಮೈಸೂರಿನ ಸುರೇಶ್ ಜೈನ್ ಕುಟುಂಬದವರು ಬಸದಿಯನ್ನು ನಿರ್ಮಿಸಲಿದ್ದಾರೆ ಎಂದರು.

ಅಕ್ಷಯ ತೃತೀಯ ದಿವಸ ಶಿಲಾನ್ಯಾಸ ನೆರವೇರಿಸಿದ್ದು, ಈ ಶಿಲಾಮಯ ಬಸದಿಯಲ್ಲಿ ಚತುರ್ಮುಖ ಜಿನ ಮೂರ್ತಿಗಳು, ಯಕ್ಷ ಯಕ್ಷಿಯರನ್ನು ನಿರ್ಮಿಸಲಾಗುವುದು. ಆಚಾರ್ಯ ಸುವಿಧಿ ಸಾಗರ ಮಹಾರಾಜರ ಮುಂಬರುವ ಚಾತುರ್ಮಾಸದ ಸಂದರ್ಭದಲ್ಲಿ ಪಂಚಕಲ್ಯಾಣ ವಿಧಿಗಳು ಜರುಗಲಿವೆ ಎಂದರು.

ಮೈಸೂರಿನ ಜೈನ ಕೈಗಾರಿಕೆ ಕಾಟನ್ ವೇಸ್ಟ್‌ನ ಮಾಲೀಕ ರೂಪಾ ಸುರೇಶ್ ಜೈನ್ ಮಾತನಾಡಿ, ನಮ್ಮ ಪುತ್ರ ಅಭಿಜಿತ್ ಜೈನ್ ಸ್ಮರಣಾರ್ಥ ನೂತನ ಶಿಲಾಮಯ ಜಿನ ಬಸದಿಯನ್ನು 2.35 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ ಎಂದರು.

ಕಾರ್ಯಕ್ರಮಕ್ಕೂ ಮುನ್ನ ಪ್ರತಿಷ್ಠಾಪಿಸಿದ್ದ ಮಂಗಲ ಕಲಶಗಳಿಂದ ಎಲ್ಲಾ ಧಾರ್ಮಿಕ ವಿಧಿಗಳನ್ನು ನಡೆಸಲಾಯಿತು. ಇದೇ ಸಂದರ್ಭದಲ್ಲಿ ಕ್ಷೇತ್ರದವತಿಯಿಂದ ದಾನಿಗಳಾದ ರೂಪ ಸುರೇಶ್ ಜೈನ್ ಕುಟುಂಬಸ್ಥರನ್ನು ಶ್ರೀಗಳು ಗೌರವಿಸಿದರು.

ಪೂಜೆಯ ನೇತೃತ್ವವನ್ನು ನಂದಕುಮಾರ್ ಶಾಸ್ತ್ರಿ, ಎಸ್.ಪಿ. ಜಿನೇಶ್ ವಹಿಸಿದ್ದರು. ಶ್ರೀಗಳು ಜಿನ ಬಸದಿಯ ಅಡಿಪಾಯಕ್ಕೆ ಚಿನ್ನ ಬೆಳ್ಳಿ, ಮುತ್ತು, ರತ್ನಗಳನ್ನು ಅರ್ಪಿಸಿದರು.

ಆಚಾರ್ಯ ಸುವಿಧಿ ಸಾಗರ ಮಹಾರಾಜರು, ಅನುಪಮಕೀರ್ತಿ ಮಹಾರಾಜ್, ಸುದೇಹ ಸಾಗರ ಮಹಾರಾಜ್ ಹಾಗು ಸಂಘಸ್ಥ ಮಾತಾಜಿ ಅವರು ಸಾನ್ನಿಧ್ಯ ವಹಿಸಿದ್ದರು.

ಗ್ರಾಮ ಪಂಚಾಯಿತಿ ಸದಸ್ಯರಾದ ಶಾಲಿನಿ ದೇವೇಂದ್ರಕುಮಾರ್, ಎಸ್.ಬಿ. ಯಶಸ್, ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷ ಹೆಚ್.ಪಿ. ಅಶೋಕ್ ಕುಮಾರ್, ಕೂಷ್ಮಾಂಡಿನಿ ಜೈನ ಮಹಿಳಾ ಸಮಾಜದ ಅಧ್ಯಕ್ಷೆ ಮಹಾಲಕ್ಷ್ಮಿ ಪ್ರಮೋದ್ ಕುಮಾರ್, ಜೈನ ಸಮಾಜದ ಕಾರ್ಯದರ್ಶಿ ಎಸ್.ಪಿ. ಬಾನುಕುಮಾರ್, ಪದಾಧಿಕಾರಿಗಳಾದ ಎಸ್.ಕೆ. ವಿಜಯಕುಮಾರ್, ಎಸ್.ವಿ. ಭರತೇಶ್, ಶ್ರೇಯಸ್, ಹೇಮಂತ್ ಕುಮಾರ್, ಸಂಜು ಮತ್ತಿತರರಿದ್ದರು.

# ಗುಂಡಿಮಯವಾದ ಮತಿಘಟ್ಟ ಕೆರೆ ಏರಿ ರಸ್ತೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಳೇಬೀಡು: ಮತಿಘಟ್ಟ ಕೆರೆ ಏರಿಯ ರಸ್ತೆ ಭರ್ತಿ ಗುಂಡಿಗಳಾಗಿರುವುದರಿಂದ ವಾಹನ ಸಂಚಾರಕ್ಕೆ ತೊಡಕಾಗಿದೆ.

ಕೆರೆ ಏರಿ ರಸ್ತೆ ಜಾವಗಲ್ ಕಡೆಯಿಂದ ಶಿವಮೊಗ್ಗ, ಬೆಂಗಳೂರು, ಚಿಕ್ಕಮಗಳೂರು ಮೊದಲಾದ ನಗರಗಳಿಗೆ ಸಂಪರ್ಕ ಕಲ್ಪಿಸುತ್ತದೆ. ಮತಿಘಟ್ಟ ಕೆರೆ ಏರಿ ಕನಕೇನಹಳ್ಳಿ, ಉಂಡಿಗನಾಳು ಮಾರ್ಗದ ರಸ್ತೆ ಹಳೇಬೀಡಿನಿಂದ ಅರಸೀಕೆರೆಗೆ ಹತ್ತಿರದಲ್ಲಿದೆ.

ಕಳೆದ ಎರಡು ವರ್ಷದಿಂದ ರಸ್ತೆಯ ಸ್ಥಿತಿಗತಿ ಅಯೋಮಯವಾಗಿದೆ. ಡಾಂಬರ್ ಹಾಕಿದ ಅವಶೇಷ ಇಲ್ಲದಂತೆ ರಸ್ತೆ ಕಿತ್ತು ಹೋಗಿದೆ. ಗುಂಡಿಗಳ ಸ್ವರೂಪ ಭೀಕರವಾಗುತ್ತಿದ್ದು, ಅಪಘಾತಕ್ಕೆ ಆಹ್ವಾನ ನೀಡುತ್ತಿವೆ. ಮಳೆಗಾಲದಲ್ಲಿ ರಸ್ತೆ ಗುಂಡಿ ಭರ್ತಿ ನೀರು ತುಂಬಿಕೊಂಡು ಕೆರೆಗಳಂತಾಗುತ್ತವೆ. ಗುಂಡಿಗೆ ಇಳಿಯದೆ ವಾಹನ ಚಾಲನೆ ಮಾಡಲು ಸಾಧ್ಯವಿಲ್ಲ. ದೊಡ್ಡ ವಾಹನಗಳು ಗುಂಡಿಯಲ್ಲಿ ಹೂತು ಕೊಳ್ಳುವ ಸಾಧ್ಯತೆ ಇದೆ. ಬೈಕ್ ಚಾಲನೆ ಮಾಡುವವರು ಮಳೆಗಾಲ ಮಾತ್ರವಲ್ಲದೆ ಬೇರೆ ಸಮಯದಲ್ಲಿಯೂ ಬಿದ್ದು ಮೇಲೇಳುತ್ತಿರುತ್ತಾರೆ. ಸಾಕಷ್ಟು ಮಂದಿಗೆ ತೀವ್ರ ಸ್ವರೂಪದ ಗಾಯಗಳಾಗಿವೆ. ಅದೃಷ್ಟವಶಾತ್ ಪ್ರಾಣ ಹಾನಿ ಸಂಭವಿಸಿಲ್ಲ ಎಂದು ಜಿಲ್ಲಾ ರೈತ ಸಂಘ ಮುಖಂಡ ಎಲ್.ಈ.ಶಿವಪ್ಪ ಹೇಳಿದರು.

ಸಾವಿರಾರು ಎಕರೆ ಕೃಷಿ ಭೂಮಿಗೆ ಮತಿಘಟ್ಟ ಕೆರೆ ಏರಿ ಸಂಪರ್ಕ ಕಲ್ಪಿಸುತ್ತದೆ. ಕೃಷಿ ಉತ್ಪನ್ನ ಸಾಗಾಟಕ್ಕೆ ವಾಹನ ಚಾಲಕರು ಬರಲು ಹಿಂದೇಟು ಹಾಕುತ್ತಾರೆ. ಕೃಷಿ ಉತ್ಪನ್ನಗಳನ್ನು ಮನೆ ಇಲ್ಲವೆ ಮಾರುಕಟ್ಟೆಗೆ ಸಾಗಿಸುವುದು ಸುಲಭ ಸಾಧ್ಯವಾಗಿಲ್ಲ. ಲೋಕೋಪಯೋಗಿ ಇಲಾಖೆಯವರು ರಸ್ತೆ ಡಾಂಬರೀಕರಣ ಮಾಡದಿದ್ದರೆ ಇಲ್ಲಿಯ ರೈತರಿಗೆ ಕೃಷಿ ಕಾಯಕ ಕಷ್ಟವಾಗುತ್ತದೆ ಎಂದು ರೈತ ಅಶೋಕ ಹೇಳಿದರು.

ಕೆರೆ ಏರಿ ಗುಂಡಿಮಯವಾಗಿರುವುದರೊಂದಿಗೆ ಕಿರಿದಾಗಿರುವುದರಿಂದ ವಾಹನ ಚಾಲನೆ ಕಷ್ಟವಾಗಿದೆ. ವಾಹನ ಚಲಿಸುವಾಗ ಆಡು, ಕುರಿ ಹಾಗೂ ಜಾನುವಾರುಗಳನ್ನು ಕರೆದೊಯ್ಯಲು ಕಷ್ಟ ಅನುಭವಿಸುವಂತಾಗಿದೆ ಎಂದರು ರೈತ ಉಮೇಶ್.

### ಏರಿಗೆ ಬ್ಯಾರಿಕೇಡ್ ಇಲ್ಲ

ಕೆರೆ ಏರಿಗೆ ಬ್ಯಾರಿಕೇಡ್ ನಿರ್ಮಿಸದೆ ಇರುವುದರಿಂದ ಅಪಾಯ ಸಾಧ್ಯತೆ ಇದೆ. ಗುಂಡಿ ರಸ್ತೆಯಲ್ಲಿ ಚಾಲಕನ ನಿಯಂತ್ರಣ ತಪ್ಪಿದರೆ ವಾಹನ ಕೆರೆಗೆ ಬೀಳುವ ಸಾಧ್ಯತೆ ಇದೆ. ಕಳೆದ ವರ್ಷದ ಮಳೆಯಿಂದ ಕೆರೆಯಲ್ಲಿ ನೀರಿದೆ. ಕೆರೆಗೆ ವಾಹನ ಉರುಳಿದರೆ, ನೀರಿನಲ್ಲಿ ಮುಳುಗುತ್ತದೆ. ಚಾಲಕ ಹಾಗೂ ಪ್ರಯಾಣಿಕರಿಗೆ ಪ್ರಾಣಾಪಾಯ ಸಂಭವಿಸುವ ಅವಕಾಶ ಹೆಚ್ಚಾಗಿದೆ ಎಂದು ಹಳೇಬೀಡಿನ ಬಸವರಾಜು ತಿಳಿಸಿದರು.

# ಜೋರು ಮಳೆಗೆ ತರಕಾರಿ ಬೆಳೆ ನಾಶ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ತಾಲ್ಲೂಕಿನ ವಿವಿಧೆಡೆ ಗುರುವಾರ ಸುರಿದ ಜೋರು ಮಳೆಗೆ ಜನಜೀವನ ಸಂಪೂರ್ಣ ಅಸ್ತವ್ಯಸ್ತವಾಗಿರುವುದು ಮಾತ್ರವಲ್ಲದೆ ತರಕಾರಿ ಬೆಳೆ ನೆಲಕಚ್ಚಿದೆ.

ತಾಲ್ಲೂಕಿನ ಹೆಬ್ಬಾಳು ಗ್ರಾಮ ಸೇರಿ ಇತರ ಕಡೆಗಳಲ್ಲಿ ತರಕಾರಿ ಬೆಳೆ ನಾಶವಾಗಿ ರೈತರು ಕಣ್ಣೀರಿನಲ್ಲಿ ಕೈ ತೊಳೆಯುವಂತಾಗಿದೆ. ಗುಡುಗು ಸಿಡಿಲಿನೊಂದಿಗೆ ಸಂಜೆ 5 ರಿಂದ ಆರಂಭವಾದ ಮಳೆ 7 ಗಂಟೆ ವರೆಗೆ ಎಡಬಿಡದೆ ಸುರಿಯಿತು. ರೈತರು ಬೆಳೆದಿದ್ದ ಬೀನ್ಸ್, ಹೀರೇಕಾಯಿ, ತೊಂಡೆಕಾಯಿ ಮತ್ತು ಮೆಣಸಿನ ಗಿಡಗಳು ಸಂಪೂರ್ಣವಾಗಿ ನೆಲಕಚ್ಚಿವೆ. ಬಿರುಗಾಳಿಯಿಂದ ಹಲವಾರು ವಿದ್ಯುತ್ ಕಂಬಗಳು ಬಿದ್ದು, ರಾತ್ರಿಯಿಡೀ ಕತ್ತಲೆಯಲ್ಲಿ ಕಳೆಯುವಂತಾಗಿತ್ತು. ಮರಗಳು ರಸ್ತೆಗೆ ಬಿದ್ದಿದ್ದರಿಂದ ವಾಹನ ಸಂಚಾರಕ್ಕೆ ತೊಂದರೆಯಾಯಿತು. ಹೆಬ್ಬಾಳು ಗ್ರಾಮದ ಪಾರ್ವತಮ್ಮ ಮತ್ತು ಬಸವಗೌಡರ ಮಕ್ಕಳಾದ



ಶಂಕರಗೌಡ ಮತ್ತು ಸೋಮಶೇಖರ್ ಒಂದೊಂದು ಎಕರೆಯಲ್ಲಿ ಬೆಳೆದ ಬೀನ್ಸ್ ಬೆಳೆ ಸಂಪೂರ್ಣವಾಗಿ ಹಾಳಾಗಿದೆ. ಎರಡು ತಿಂಗಳಿಂದ ಸುಮಾರು 50 ಸಾವಿ ರೂ. ವೆಚ್ಚ ಮಾಡಿ ಬೆಳೆದಿದ್ದ ಬೀನ್ಸ್ ಬೆಲೆ ಮಾರುಕಟ್ಟೆಯಲ್ಲಿ ಕೆ.ಜಿ.ಗೆ 50 ರೂ. ಇದೆ. ಎಲ್ಲವೂ ಅಂದುಕೊಂಡಂತೆ ಆಗಿದ್ದರೆ ಅಧಿಕ ಲಾಭ ನೋಡಬಹುದಿತ್ತು. ಆದರೆ ಮಳೆರಾಯನ ಆರ್ಭಟಕ್ಕೆ ರೈತರ ಕನಸುಗಳೆಲ್ಲ ನುಚ್ಚು ನೂರಾಗಿದೆ. ತರಕಾರಿ ಜೊತೆಗೆ ಮಾವಿನ ಕಾಯಿ ಉದುರಿ ರೈತರಿಗೆ ಮತ್ತಷ್ಟು ನಷ್ಟವಾಗಿದೆ. ಶುಂಠಿ ಬೆಳೆಗೆ ಯಾವುದೇ ಹಾನಿಯಾಗಿಲ್ಲ.

# ಕಬ್ಬಳಿ ಶಾಲೆಯ ಪುಣ್ಯನಿಧಿಗೆ 4ನೇ ಸ್ಥಾನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ತಾಲ್ಲೂಕಿನ ಹಿರೀಸಾವೆ ಹೋಬಳಿ ಕಬ್ಬಳಿ ಶ್ರೀ ಬಸವೇಶ್ವರ ಸ್ವಾಮಿ ಆಂಗ್ಲ ಮಾಧ್ಯಮ ಶಾಲೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ. 100 ಫಲಿತಾಂಶ ಗಳಿಸಿದ್ದು ಆರ್. ಪುಣ್ಯನಿಧಿ 625ಕ್ಕೆ 622 ಅಂಕ ಪಡೆದು ತಾಲ್ಲೂಕಿಗೆ ಪ್ರಥಮ ಹಾಗೂ ರಾಜ್ಯಕ್ಕೆ 4ನೇ ಸ್ಥಾನ ಪಡೆದಿದ್ದಾರೆ.



ಗಾನವಿ ಎಸ್.ಗೌಡ 620, ಎನ್.ಎಸ್. ಹೇಮಲತಾ 615 ಅಂಕ ಪಡೆದಿದ್ದಾರೆ.

ಪರೀಕ್ಷೆ ಬರೆದ ಎಲ್ಲಾ 85 ವಿದ್ಯಾರ್ಥಿಗಳು ಉತ್ತಮ ಅಂಕಗಳೊಂದಿಗೆ ತೇರ್ಗಡೆ ಹೊಂದಿದ್ದಾರೆ. ಅತ್ಯುನ್ನತ ಶ್ರೇಣಿ 60, ಪ್ರಥಮ ಶ್ರೇಣಿಯಲ್ಲಿ 20 ಹಾಗು ದ್ವಿತೀಯ ಶ್ರೇಣಿಯಲ್ಲಿ 5 ವಿದ್ಯಾರ್ಥಿಗಳು ಪಾಸಾಗಿದ್ದಾರೆ.

ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ, ಕಬ್ಬಳಿ ಮಠದ ಶ್ರೀ ಶಿವಪುತ್ರನಾಥ ಸ್ವಾಮೀಜಿ, ಮುಖ್ಯಶಿಕ್ಷಕ ಟಿ. ತಿಮ್ಮೇಗೌಡ ಹಾಗೂ ಶಿಕ್ಷಕ ವೃಂದ ವಿದ್ಯಾರ್ಥಿಗಳನ್ನು ಅಭಿನಂದಿಸಿದೆ.

# ಪ್ರಜಾಪ್ರಭುತ್ವದ ಕಾವಲುಗಾರ ಪತ್ರಿಕೆ

**ಕನ್ನಡ ಪೋಸ್ಟ್ ವಿಶೇಷ**

ಇಂದು ವಿಶ್ವ ಪತ್ರಿಕಾ ಸ್ವಾತಂತ್ರ್ಯ ದಿನ

ಪ್ರತಿವರ್ಷ ಮೇ 3 ರಂದು ವಿಶ್ವ ಪತ್ರಿಕಾ ಸ್ವಾತಂತ್ರ್ಯ ದಿನ ಆಚರಿಸಲಾಗುತ್ತದೆ. ಇದು ಪ್ರಜಾಪ್ರಭುತ್ವ, ಪಾರದರ್ಶಕತೆ ಮತ್ತು ಜವಾಬ್ದಾರಿಯನ್ನು ಉತ್ತೇಜಿಸುವಲ್ಲಿ ಸ್ವತಂತ್ರ, ಸ್ವಾಯತ್ತ ಮತ್ತು ಬಹುತ್ವವಾದಿ ಪತ್ರಿಕೆಯ ಪಾತ್ರವನ್ನು ಒತ್ತಿಹೇಳುವ ಜಾಗತಿಕ ಕಾರ್ಯಕ್ರಮವಾಗಿದೆ.

1993ರಲ್ಲಿ ಯುನೈಟೆಡ್ ನೇಷನ್ಸ್ ಜನರಲ್ ಅಸೆಂಬ್ಲಿಯಿಂದ ಘೋಷಿಸಲ್ಪಟ್ಟ ಈ ದಿನವು 1991ರಲ್ಲಿ ಯುನೆಸ್ಕೋದ ಜನರಲ್ ಕಾನ್ಫರೆನ್ಸ್‌ನಲ್ಲಿ ಅಂಗೀಕರಿಸಲಾದ ಶಿಫಾರಸಿನ ಆಧಾರದ ಮೇಲೆ ಆರಂಭವಾಯಿತು. ಈ ದಿನವು ಪತ್ರಿಕಾ ಸ್ವಾತಂತ್ರ್ಯದ ಮಹತ್ವವನ್ನು ಮತ್ತು ಪತ್ರಕರ್ತರು ಸತ್ಯವನ್ನು ಅನ್ವೇಷಿಸುವಲ್ಲಿ ಎದುರಿಸುವ ಸವಾಲುಗಳನ್ನು ನೆನಪಿಸುತ್ತದೆ. ಪತ್ರಿಕಾ ಸ್ವಾತಂತ್ರ್ಯ ದಿನವು ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಮಾಹಿತಿಗೆ ಪ್ರವೇಶವು ಮೂಲಭೂತ ಮಾನವ ಹಕ್ಕುಗಳೆಂಬ ಸಾರ್ವತ್ರಿಕ ತತ್ವದಲ್ಲಿ ಬೇರೂರಿದೆ. ಸ್ವತಂತ್ರ ಪತ್ರಿಕೆಯು ಒಂದು ಕಾವಲುಗಾರನಂತೆ ಕಾರ್ಯನಿರ್ವಹಿಸುತ್ತದೆ. ಸರ್ಕಾರಗಳು, ಕಾರ್ಪೊರೇಟ್‌ಗಳು ಮತ್ತು ಸಂಸ್ಥೆಗಳನ್ನು ಜವಾಬ್ದಾರಿಗೆ ಒಳಪಡಿಸುತ್ತದೆ, ಜೊತೆಗೆ ಅಂಚಿನಲ್ಲಿರುವ ಧ್ವನಿಗಳನ್ನು ವರ್ಧಿಸುತ್ತದೆ ಮತ್ತು ಸಾರ್ವಜನಿಕರಿಗೆ ಮಾಹಿತಿ ಒದಗಿಸುತ್ತದೆ. ಇದು ಪ್ರಜಾಪ್ರಭುತ್ವ ಸಮಾಜಗಳ ಮೂಲಾಧಾರವಾಗಿದೆ. ಇದು ನಾಗರಿಕರಿಗೆ ತಿಳುವಳಿಕೆಯುಳ್ಳ ನಿರ್ಧಾರಗಳನ್ನು ತೆಗೆದುಕೊಳ್ಳಲು ಮತ್ತು ಆಡಳಿತದಲ್ಲಿ ಅರ್ಥಪೂರ್ಣವಾಗಿ ಭಾಗವಹಿಸಲು ಅನುವು ಮಾಡಿಕೊಡುತ್ತದೆ.

ಈ ದಿನವು ಸತ್ಯವನ್ನು ವರದಿ ಮಾಡಲು ತಮ್ಮ ಜೀವವನ್ನು ಪಣಕ್ಕಿಡುವ ಪತ್ರಕರ್ತರ ತ್ಯಾಗವನ್ನು ಸಹ ಗೌರವಿಸುತ್ತದೆ. ಯುನೆಸ್ಕೋದ ಪ್ರಕಾರ ಪ್ರತಿವರ್ಷ ನೂರಾರು ಪತ್ರಕರ್ತರು ದಾಳಿಗೊಳಗಾಗುತ್ತಾರೆ, ಕಿರುಕುಳಕ್ಕೊಳಗಾಗುತ್ತಾರೆ ಅಥವಾ ಕೊಲ್ಲಲ್ಪಡುತ್ತಾರೆ. ಇನ್ನೂ ಹಲವರು ಸೆನ್ಸಾರ್‌ಶಿಪ್, ಜೈಲುವಾಸ ಅಥವಾ ಕಾನೂನು ಕಿರುಕುಳವನ್ನು ಎದುರಿಸುತ್ತಾರೆ. ವಿಶ್ವ ಪತ್ರಿಕಾ ಸ್ವಾತಂತ್ರ್ಯ ದಿನವು ಪತ್ರಕರ್ತರು ಮತ್ತು ಮಾಧ್ಯಮ ಕಾರ್ಯಕರ್ತರಿಗೆ ಬಲವಾದ ರಕ್ಷಣೆಗೆ ಕರೆ ನೀಡುತ್ತದೆ. ಅವರ ಸುರಕ್ಷತೆ ಮತ್ತು ಸ್ವಾತಂತ್ರ್ಯವು ರಾಜಿಯಾಗದ ವಿಷಯವೆಂದು ಒತ್ತಿಹೇಳುತ್ತದೆ.

**2025ರ ಥೀಮ್:** ವಿಶ್ವ ಪತ್ರಿಕಾ ಸ್ವಾತಂತ್ರ್ಯ ದಿನವು ಒಂದು ಥೀಮ್ ಅನ್ನು ಅಳವಡಿಸಿಕೊಂಡು ಜಾಗತಿಕ ಸಮಸ್ಯೆಗಳನ್ನು ಎದುರಿಸುತ್ತದೆ. 2025ರಲ್ಲಿ ಥೀಮ್ ಆಗ್ರಹಕ್ಕಾಗಿ ಪತ್ರಿಕೆ: ಪರಿಸರ ಸಂಕಷ್ಟದ ಮುಖಾಂತರ ಪತ್ರಿಕೋದ್ಯಮ ಆಗಿದೆ. ಈ ಥೀಮ್ ಹವಾಮಾನ ಬದಲಾವಣೆ, ಅರಣ್ಯ ನಾಶ ಮತ್ತು ಮಾಲಿನ್ಯದಂತಹ ಪರಿಸರ ಸವಾಲುಗಳ ಬಗ್ಗೆ ಜಾಗೃತಿ ಮೂಡಿಸುವಲ್ಲಿ ಪತ್ರಿಕೋದ್ಯಮದ ನಿರ್ಣಾಯಕ ಪಾತ್ರವನ್ನು ಎತ್ತಿ ತೋರಿಸುತ್ತದೆ. ಪರಿಸರ ಅನ್ಯಾಯವನ್ನು ಬಯಲಿಗೆಳೆಯುವಲ್ಲಿ ಮಾಲಿನ್ಯಕಾರಕರನ್ನು ಜವಾಬ್ದಾರಿಗೆ ಒಳಪಡಿಸುವಲ್ಲಿ ಮತ್ತು ಪರಿಸರ ಕ್ಷೀಣತೆಯಿಂದ ತೀವ್ರವಾಗಿ ಪರಿಣಾಮ ಬೀರುವ ಸಮುದಾಯಗಳ ಧ್ವನಿಯನ್ನು ವರ್ಧಿಸುವಲ್ಲಿ ಪತ್ರಕರ್ತರು ಪ್ರಮುಖ ಪಾತ್ರವಹಿಸುತ್ತಾರೆ. ಆದಾಗ್ಯೂ, ಪರಿಸರ ಪತ್ರಿಕೋದ್ಯಮವು ತನ್ನದೇ ಆದ ಸವಾಲುಗಳನ್ನು ಒಳಗೊಂಡಿದೆ. ಪರಿಸರ ಸಮಸ್ಯೆಗಳನ್ನು ವರದಿ ಮಾಡುವ ಪತ್ರಕರ್ತರು ಆಗಾಗ್ಗೆ ಪ್ರಬಲ ಒತ್ತಡಗಳಿಂದ, ಕಾರ್ಪೊರೇಟ್‌ಗಳು ಮತ್ತು ಸರ್ಕಾರಗಳಿಂದ ಬೆದರಿಕೆಗಳನ್ನು ಎದುರಿಸುತ್ತಾರೆ. ಇವು ಸಾಮಾನ್ಯವಾಗಿ ಸುಸ್ಥಿರತೆಗಿಂತ ಲಾಭಕ್ಕೆ ಆದ್ಯತೆ ನೀಡುತ್ತವೆ. 2025ರ ವಿಶ್ವ ಪತ್ರಿಕಾ ಸ್ವಾತಂತ್ರ್ಯ ದಿನವು ಪರಿಸರ ಪತ್ರಕರ್ತರಿಗೆ ಹೆಚ್ಚಿನ ಬೆಂಬಲವನ್ನು ಕೋರುತ್ತದೆ, ಅವರು ಭಯವಿಲ್ಲದೆ ಕೆಲಸ ಮಾಡಬಹುದೆಂದು ಖಾತರಿಪಡಿಸುತ್ತದೆ.

ಭಾರತದಲ್ಲಿ ಪತ್ರಿಕಾ ಸ್ವಾತಂತ್ರ್ಯ: ಒಂದು ಕೇಸ್ ಸ್ಟಡಿ ಪ್ರಕಾರ ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತದಲ್ಲಿ ಪತ್ರಿಕಾ ಸ್ವಾತಂತ್ರ್ಯವನ್ನು ಆಚರಿಸಲಾಗುತ್ತದೆ ಮತ್ತು ಸವಾಲಿಗೆ ಒಳಗಾಗುತ್ತದೆ. ದೇಶವು ಸಾವಿರಾರು




ವೃತ್ತ ಪತ್ರಿಕೆಗಳು, ದೂರದರ್ಶನ ಚಾನಲ್‌ಗಳು ಮತ್ತು ಡಿಜಿಟಲ್ ವೇದಿಕೆಗಳೊಂದಿಗೆ ರೋಮಾಂಚಕ ಮಾಧ್ಯಮ ವಾತಾವರಣವನ್ನು ಹೊಂದಿದೆ. ಆದರೆ, ಭಾರತದ ಪತ್ರಕರ್ತರು ಕಾನೂನು ಕಿರುಕುಳ, ದೈಹಿಕ ದಾಳಿಗಳು ಮತ್ತು ಆನ್‌ಲೈನ್ ಟ್ರೋಲಿಂಗ್‌ನಂತಹ ಗಂಭೀರ ಸವಾಲುಗಳನ್ನು ಎದುರಿಸುತ್ತಾರೆ. 2024ರ ವಿಶ್ವ ಪತ್ರಿಕಾ ಸ್ವಾತಂತ್ರ್ಯ ಸೂಚ್ಯಂಕದ ಪ್ರಕಾರ, ರಿಪೋರ್ಟರ್ಸ್ ವಿಥೌಟ್ ಬಾರ್ಡರ್ಸ್ (RSF) ಪ್ರಕಾರ, ಭಾರತವು 180 ದೇಶಗಳಲ್ಲಿ 159 ನೇ ಸ್ಥಾನದಲ್ಲಿದೆ, ಇದು ಮಾಧ್ಯಮ ಸ್ವಾತಂತ್ರ್ಯ ಮತ್ತು ಪತ್ರಕರ್ತರ ಸುರಕ್ಷತೆಯ ಬಗ್ಗೆ ಕಳವಳವನ್ನು ಪ್ರತಿಬಿಂಬಿಸುತ್ತದೆ.

ವಿಶ್ವ ಪತ್ರಿಕಾ ಸ್ವಾತಂತ್ರ್ಯ ದಿನದಂದು ಭಾರತವು ಪತ್ರಿಕಾ ಸ್ವಾತಂತ್ರ್ಯವನ್ನು ಎತ್ತಿಹಿಡಿಯುವ ತನ್ನ ಬದ್ಧತೆಯನ್ನು ಪರಿಶೀಲಿಸುತ್ತದೆ. ಈ ದಿನವು ಮಾಧ್ಯಮ ಸೆನ್ಸಾರ್‌ಶಿಪ್, ಪತ್ರಕರ್ತರನ್ನು ಮೌನಗೊಳಿಸಲು ಕಾನೂನುಗಳ ದುರುಪಯೋಗ ಮತ್ತು ರಾಜಕೀಯ, ಭ್ರಷ್ಟಾಚಾರ ಮತ್ತು ಪರಿಸರ ಸಮಸ್ಯೆಗಳಂತಹ ಸೂಕ್ಷ್ಮ ವಿಷಯಗಳನ್ನು ವರದಿ ಮಾಡುವವರಿಗೆ ಉತ್ತಮ ರಕ್ಷಣೆಯ ಅಗತ್ಯತೆಯಂತಹ ಸಮಸ್ಯೆಗಳನ್ನು ಎದುರಿಸಲು ಅವಕಾಶವಾಗಿದೆ. ಭಾರತೀಯ ಪತ್ರಕರ್ತರು ಮತ್ತು ಮಾಧ್ಯಮ ಸಂಸ್ಥೆಗಳು ಈ ಸಂದರ್ಭವನ್ನು ಸುಧಾರಣೆಗಳನ್ನು, ಒಳಗೊಂಡಂತೆ ಬಲವಾದ ಕಾನೂನು ರಕ್ಷಣೆ ಮತ್ತು ಮಾಧ್ಯಮ ಬಹುತ್ವವನ್ನು ಉತ್ತೇಜಿಸುವ ನೀತಿಗಳನ್ನು ಪ್ರತಿಪಾದಿಸಲು ಬಳಸಿಕೊಳ್ಳಬೇಕಿದೆ.

**ಪತ್ರಿಕಾ ಸ್ವಾತಂತ್ರ್ಯಕ್ಕೆ ಜಾಗತಿಕ ಸವಾಲು:** ಜಾಗತಿಕವಾಗಿ 2025ರಲ್ಲಿ ಪತ್ರಿಕಾ ಸ್ವಾತಂತ್ರ್ಯವು ವಿವಿಧ ಬೆದರಿಕೆಗಳನ್ನು ಎದುರಿಸುತ್ತಿದೆ. ಅನೇಕ ದೇಶಗಳಲ್ಲಿ ಸರ್ಕಾರಗಳು ಕಟ್ಟುನಿಟ್ಟಾದ ಸೆನ್ಸಾರ್ ಶಿಪ್ ಅನ್ನು ವಿಧಿಸುತ್ತವೆ. ಸ್ವತಂತ್ರ ಮಾಧ್ಯಮ ಸಂಸ್ಥೆಗಳನ್ನು ಮುಚ್ಚುತ್ತವೆ ಮತ್ತು ಭಿನ್ನಾಭಿಪ್ರಾಯವನ್ನು ತಡೆಗಟ್ಟಲು ಪತ್ರಕರ್ತರನ್ನು ಜೈಲಿಗೆ ಅಟ್ಟುತ್ತವೆ.

**ತಪ್ಪು ಮಾಹಿತಿ ಮತ್ತು ಸುಳ್ಳು ಸುದ್ದಿ:** ಡಿಜಿಟಲ್ ವೇದಿಕೆಗಳ ಏರಿಕೆಯು ತಪ್ಪು ಮಾಹಿತಿಯ ಒಳಹರಿವಿಗೆ ಕಾರಣವಾಗಿದೆ. ಇದು ಪತ್ರಿಕೋದ್ಯಮದಲ್ಲಿ ಸಾರ್ವಜನಿಕ ವಿಶ್ವಾಸವನ್ನು ಕುಗ್ಗಿಸುತ್ತದೆ ಮತ್ತು ವಿಶ್ವಾಸಾರ್ಹ ವರದಿಗಾರರ ಕೆಲಸವನ್ನು ಸಂಕೀರ್ಣಗೊಳಿಸುತ್ತದೆ.

**ಆರ್ಥಿಕ ಒತ್ತಡಗಳು:** ಕಡಿಮೆಯಾಗುತ್ತಿರುವ ಆದಾಯದಿಂದಾಗಿ ಮಾಧ್ಯಮ ಸಂಸ್ಥೆಗಳು ಆರ್ಥಿಕ ಸವಾಲುಗಳನ್ನು ಎದುರಿಸುತ್ತವೆ. ಕೆಲವು ಸಂಸ್ಥೆಗಳು ಸಂಪಾದಕೀಯ ಸ್ವಾತಂತ್ರ್ಯವನ್ನು ರಾಜಿ ಮಾಡಿಕೊಳ್ಳಲು ಅಥವಾ ಸಂಪೂರ್ಣವಾಗಿ ಮುಚ್ಚಲ್ಪಡಲು ಒತ್ತಾಯಿಸುತ್ತವೆ.

**ಪತ್ರಕರ್ತರ ಸುರಕ್ಷತೆ:** ಯುನೆಸ್ಕೋದ ಪ್ರಕಾರ 2006 ರಿಂದ 2023ರ ವರೆಗೆ ವಿಶ್ವಾದ್ಯಂತ 1,400ಕ್ಕೂ ಹೆಚ್ಚು ಪತ್ರಕರ್ತರು ಕೊಲ್ಲಲ್ಪಟ್ಟಿದ್ದಾರೆ. ಇದರಲ್ಲಿ ಅನೇಕ ಪ್ರಕರಣಗಳು ಇತ್ಯರ್ಥವಾಗಿಲ್ಲ. ವಿಶ್ವ ಪತ್ರಿಕಾ ಸ್ವಾತಂತ್ರ್ಯ ದಿನವು ಸರ್ಕಾರಗಳು, ನಾಗರಿಕ ಸಮಾಜ ಮತ್ತು ಸಾರ್ವಜನಿಕರಿಗೆ ಈ ಸವಾಲುಗಳನ್ನು ಎದುರಿಸಲು ಕ್ರಿಯಾಶೀಲ ಕರೆಯಾಗಿದೆ. ಇದು ಪತ್ರಕರ್ತರನ್ನು ರಕ್ಷಿಸುವ ಕಾನೂನುಗಳನ್ನು ಜಾರಿಗೆ ತರಲು ತಪ್ಪು ಮಾಹಿತಿಯನ್ನು ಎದುರಿಸಲು ಮಾಧ್ಯಮ ಸಾಕ್ಷರತೆಯನ್ನು ಉತ್ತೇಜಿಸಲು ಮತ್ತು ಸ್ವತಂತ್ರ ಪತ್ರಿಕೋದ್ಯಮಕ್ಕೆ ಸುಸ್ಥಿರ ಮಾದರಿಗಳನ್ನು ಬೆಂಬಲಿಸಲು ಒತ್ತಾಯಿಸುತ್ತದೆ. ವಿಶ್ವ ಪತ್ರಿಕಾ ಸ್ವಾತಂತ್ರ್ಯ ದಿನವನ್ನು ಹೇಗೆ ಆಚರಿಸಲಾಗುತ್ತದೆ. ವಿಶ್ವ ಪತ್ರಿಕಾ ಸ್ವಾತಂತ್ರ್ಯ ದಿನವನ್ನು ವಿಶ್ವಾದ್ಯಂತ ವಿವಿಧ ಕಾರ್ಯಕ್ರಮಗಳು ಮತ್ತು ಉಪಕ್ರಮಗಳ ಮೂಲಕ ಗುರುತಿಸಲಾಗುತ್ತದೆ.

**ಸಮ್ಮೇಳನ ಮತ್ತು ಕಾರ್ಯಾಗಾರ:** ಯುನೆಸ್ಕೋ ಮತ್ತು ಇತರ ಸಂಸ್ಥೆಗಳು ಪತ್ರಿಕಾ ಸ್ವಾತಂತ್ರ್ಯ ಸಮಸ್ಯೆಗಳನ್ನು ಚರ್ಚಿಸಲು, ಉತ್ತಮ ಅಭ್ಯಾಸಗಳನ್ನು ಹಂಚಿಕೊಳ್ಳಲು ಮತ್ತು ಪತ್ರಕರ್ತರನ್ನು ಗೌರವಿಸಲು ಜಾಗತಿಕ ಸಮ್ಮೇಳನಗಳನ್ನು ಆಯೋಜಿಸುತ್ತವೆ.




**ಪ್ರಶಸ್ತಿ ಮತ್ತು ಮನ್ನಣೆ:** ಯುನೆಸ್ಕೋ/ಗಿಲ್ಲರ್ಮೊ ಕಾನೊ ವಿಶ್ವ ಪತ್ರಿಕಾ ಸ್ವಾತಂತ್ರ್ಯ ಪ್ರಶಸ್ತಿಯನ್ನು ಪತ್ರಿಕಾ ಸ್ವಾತಂತ್ರ್ಯಕ್ಕೆ ಗಮನಾರ್ಹ ಕೊಡುಗೆ ನೀಡಿದ ವ್ಯಕ್ತಿಗಳಿಗೆ ಅಥವಾ ಸಂಸ್ಥೆಗಳಿಗೆ ವಾರ್ಷಿಕವಾಗಿ ನೀಡಲಾಗುತ್ತದೆ. 2025 ರಲ್ಲಿ ಈ ಪ್ರಶಸ್ತಿಯು ಪತ್ರಕರ್ತರನ್ನು ತಮ್ಮ ಕಾರ್ಯದಲ್ಲಿ ಮುಂದುವರಿಯಲು ಪ್ರೇರೇಪಿಸುತ್ತದೆ.

**ಸಾರ್ವಜನಿಕ ಅಭಿಯಾನಗಳು:** ಮಾಧ್ಯಮ ಸಂಸ್ಥೆಗಳು ಮತ್ತು ವಕಾಲತ್ತು ಗುಂಪುಗಳು ಸ್ವತಂತ್ರ ಪತ್ರಿಕೆಯ ಮಹತ್ವ ಮತ್ತು ಪತ್ರಕರ್ತರು ಎದುರಿಸುವ ಅಪಾಯಗಳ ಬಗ್ಗೆ ಜಾಗೃತಿ ಮೂಡಿಸಲು ಅಭಿಯಾನಗಳನ್ನು ಪ್ರಾರಂಭಿಸುತ್ತವೆ.

ಪತ್ರಿಕಾ ಸ್ವಾತಂತ್ರ್ಯವು ಬೆದರಿಕೆಗೆ ಒಳಗಾಗಿರುವ ದೇಶಗಳಲ್ಲಿ, ಪತ್ರಕರ್ತರು ಮತ್ತು ಕಾರ್ಯಕರ್ತರು ಕಿರುಕುಳಕ್ಕೊಳಗಾದ ಸಹೋದ್ಯೋಗಿಗಳಿಗೆ ನ್ಯಾಯಕ್ಕಾಗಿ ರ್‍ಯಾಲಿಗಳು ಮತ್ತು ಜಾಗರಣೆಗಳನ್ನು ಆಯೋಜಿಸುತ್ತಾರೆ. ಮುಂದಿನ ದಾರಿ ಹವಾಮಾನ ಬದಲಾವಣೆ, ರಾಜಕೀಯ ಧ್ರುವೀಕರಣ ಮತ್ತು ತಾಂತ್ರಿಕ ಅಡ್ಡಿಯಂತಹ ಸಂಕೀರ್ಣ ಸವಾಲುಗಳನ್ನು ವಿಶ್ವವು ಎದುರಿಸುತ್ತಿರುವಾಗ ಸ್ವತಂತ್ರ ಪತ್ರಿಕೆಯ ಪಾತ್ರವು ಎಂದಿಗಿಂತಲೂ ನಿರ್ಣಾಯಕವಾಗಿದೆ. 2025ರ ವಿಶ್ವ ಪತ್ರಿಕಾ ಸ್ವಾತಂತ್ರ್ಯ ದಿನವು ಸಾರ್ವಜನಿಕ ಒಳಿತಿಗೆ ಸೇವೆ ಸಲ್ಲಿಸುವ ಪತ್ರಿಕೋದ್ಯಮವನ್ನು ರಕ್ಷಿಸಲು ಮತ್ತು ಉತ್ತೇಜಿಸಲು ಒಂದು ಜೋರಾದ ಕರೆಯಾಗಿದೆ. ಸರ್ಕಾರಗಳು ಪತ್ರಕರ್ತರನ್ನು ರಕ್ಷಿಸುವ ಕಾನೂನುಗಳನ್ನು ಜಾರಿಗೊಳಿಸಬೇಕು. ಆದರೆ ನಾಗರಿಕರು ವಿಶ್ವಾಸಾರ್ಹ ಸುದ್ದಿಗಳನ್ನು ಸೇವಿಸುವ ಮೂಲಕ, ಮಾಧ್ಯಮ ವೈವಿಧ್ಯತೆಗಾಗಿ ವಕಾಲತ್ತು ಮಾಡುವ ಮೂಲಕ ಮತ್ತು ಸತ್ಯವನ್ನು ಧೈರ್ಯವಾಗಿ ಮಾತನಾಡುವವರೊಂದಿಗೆ ಒಗ್ಗಟ್ಟಿನಿಂದ ನಿಲ್ಲುವ ಮೂಲಕ ಪತ್ರಿಕಾ ಸ್ವಾತಂತ್ರ್ಯವನ್ನು ಬೆಂಬಲಿಸಬಹುದು. ನೆಲ್ಸನ್ ಮಂಡೇಲಾ ಅವರ ಮಾತಿನಲ್ಲಿ, ವಿಮರ್ಶಾತ್ಮಕ, ಸ್ವತಂತ್ರ ಮತ್ತು ತನಿಖಾತ್ಮಕ ಪತ್ರಿಕೆಯು ಯಾವುದೇ ಪ್ರಜಾಪ್ರಭುತ್ವದ ಜೀವನಾಡಿಯಾಗಿದೆ.

ಮೇ 3 ರಂದು ಈ ಜೀವನಾಡಿಯು ಮುಕ್ತವಾಗಿ ಹರಿಯುವಂತೆ, ಸಮಾಜಗಳನ್ನು ಸಶಕ್ತಗೊಳಿಸುವ ಮತ್ತು ಭವಿಷ್ಯದ ಪೀಳಿಗೆಗಾಗಿ ಗ್ರಹವನ್ನು ಕಾಪಾಡುವ ಭರವಸೆಯನ್ನು ಮರು ಪ್ರತಿಷ್ಠಾಪಿಸೋಣ.

# ಇತಿಹಾಸದಲ್ಲಿ ಈ ದಿನ

## ಮೇ -3

**1896:** ಸ್ವಾತಂತ್ರ್ಯ ಹೋರಾಟಗಾರ ವಿ.ಕೆ. ಕೃಷ್ಣ ಮೆನನ್ ಅವರ ಜನನ. ಅವರು ಭಾರತದ ಪ್ರಮುಖ ರಾಜತಾಂತ್ರಿಕರಾಗಿದ್ದರು ಮತ್ತು ಸ್ವಾತಂತ್ರ್ಯ ಚಳವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

**1913:** ಭಾರತದ ಮೊದಲ ಚಲನಚಿತ್ರ, ರಾಜಾ ಹರಿಶ್ಚಂದ್ರ ಬಿಡುಗಡೆಯಾಯಿತು. ದಾದಾಸಾಹೇಬ್ ಫಾಲ್ಕೆ ನಿರ್ಮಿಸಿದ ಈ ಚಿತ್ರವು ಭಾರತೀಯ ಚಿತ್ರರಂಗದ ಆರಂಭಕ್ಕೆ ಮೈಲಿಗಲ್ಲಾಯಿತು.

**1969:** ಭಾರತದ ಮೂರನೇ ರಾಷ್ಟ್ರಪತಿ ಡಾ. ಜಾಕಿರ್ ಹುಸೇನ್ ಅವರ ನಿಧನ. ಅವರು ಭಾರತದ ರಾಷ್ಟ್ರಪತಿಯಾಗಿ ಸೇವೆ ಸಲ್ಲಿಸಿದ ಮೊದಲ ಮುಸ್ಲಿಂ ಆಗಿದ್ದರು.

ವಿಶ್ವ ಪತ್ರಿಕಾ ಸ್ವಾತಂತ್ರ್ಯ ದಿನ: ಮೇ 3 ರಂದು ವಿಶ್ವ ಪತ್ರಿಕಾ ಸ್ವಾತಂತ್ರ್ಯ ದಿನವನ್ನು ಆಚರಿಸಲಾಗುತ್ತದೆ. ಇದು ಪತ್ರಿಕಾ ಸ್ವಾತಂತ್ರ್ಯದ ಮಹತ್ವವನ್ನು ಒತ್ತಿ ಹೇಳುತ್ತದೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248